(ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು; ಇವುಗಳನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಸಿ. ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):–

(ಅ) ಭದ್ರಾವತಿಯಲ್ಲಿ ನೂತನವಾಗಿ ಇಂಜಿನೀಯರಿಂಗ್ ಕಾಲೇಜನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದೆ.

ಭದ್ರಾವತಿಯಲ್ಲಿ ನೂತನವಾಗಿ ಸರ್ಕಾರಿ ಬಿ.ಇಡಿ. ಕಾಲೇಜನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

(ಆ) ಅಗತ್ಯತೆ ಮತ್ತು ಅನುದಾನದ ಲಭ್ಯತೆ ಆಧರಿಸಿ ಇದನ್ನು ಸ್ಥಾಪಿಸುವ ಬಗ್ಗೆ ಕ್ರಮ ವಹಿಸಲಾಗುವುದು.

ಅನುದಾನ ಮಂಜೂರಾತಿ

249 (411) **ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು);–** ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ಮೈಸೂರು ಹುಣಸೂರು ತಾಲ್ಲೂಕಿಗೆ ಉನ್ನತ ಶಿಕ್ಷಣ ಇಲಾಖೆಯಿಂದ 2009–10ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೂ ಮಂಜೂರಾಗಿರುವ ಅನುದಾನವೆಷ್ಟು; (ವಿವರ ನೀಡುವುದು)

(ಆ) ಯಾವ ಯಾವ ಉದ್ದೇಶಗಳಿಗೆ ನೀಡಲಾಗಿದೆ; (ವಿವರ ನೀಡುವುದು)

(ಇ) ಹುಣಸೂರು ತಾಲ್ಲೂಕಿನ ಹನಗೂಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡವಿಲ್ಲದೆ ಮರದ ನೆರಳು ಹಾಗೂ ಬಾಡಿಗೆ ಕಟ್ಟಡದಲ್ಲಿ ತರಗತಿಯನ್ನು ನಡೆಸುತ್ತಿದ್ದು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)

ಶ್ರೀ ಸಿ. ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):–

(ಅ) 2009–10ನೇ ಸಾಲಿನಿಂದ 2011–13ನೇ ಸಾಲಿನವರೆಗೆ ಕಾಲೇಜು ಶಿಕ್ಷಣ ಇಲಾಖೆ ಅಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಆಯಾ ವರ್ಷಗಳಲ್ಲಿ ವೇತನ/ವೇತನೇತರ ಬಾಬ್ತುಗಳಿಗೆ ಒಟ್ಟಾರೆ ವಿವಿಧ ಲೆಕ್ಕಶೀರ್ಷಿಕೆಯಡಿಗಳಲ್ಲಿ ಅನುದಾನವನ್ನು ಆಯವ್ಯಯ ಅಂದಾಜುಗಳಲ್ಲಿ ಒಸಗಿಸಲಾಗಿದ್ದು, ಮೈಸೂರು/ಹುಣಸೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ ಪ್ರತ್ಯೇಕವಾಗಿ ಅನುದಾನವನ್ನು ಒದಗಿಸಲಾಗಿರುವುದಿಲ್ಲ.

ಒದಗಿಸಲಾದ ಅನುದಾನದ ವಿವರ:

2009–10	–	ರೂ. 20247.85
2010–11	–	ರೂ. 54735.87
2011–12	–	ರೂ. 58548.89
2012–13	–	ರೂ. 68898.11

(ಆ) ಅನುದಾನವನ್ನು ಆಯಾ ವರ್ಷಗಳಲ್ಲಿ ಕಛೇರಿ ವೆಚ್ಚ, ದೂರವಾಣಿವೆಚ್ಚ ಇತರೆ ವೆಚ್ಚಗಳಿಗಾಗಿ, ಪೀಠೋಪಕರಣ, ಪುಸ್ತಕಗಳು, ಪ್ರಯೋಗಾಲಯ ಉಪಕರಣ ಹಾಗೂ ಇನ್ನಿತರೆ ಮೂಲ ಸೌಕರ್ಯಗಳಿಗಾಗಿ ಅನುದಾನವನ್ನು ನೀಡಲಾಗಿದೆ. (ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ).

(ಇ) ಬಂದಿದೆ, ಸದರಿ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ರೂ. 11,34.00ಲಕ್ಷಗಳ ವೆಚ್ಚದಲ್ಲಿ 2 ಎಕರೆ .33 ಗುಂಟೆ ಜಮೀನನ್ನು ಖರೀದಿಸಿದ್ದು, ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಒದಗಿಸಲು ಆರ್ಥಿಕ ಇಲಾಖೆಯನ್ನು ಸಂಪರ್ಕಿಸಿದ್ದು ಅನುದಾನದ ಲಭ್ಯತೆ ನಂತರ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.

ಅನುಬಂಧ–1

ಕಛೇರಿ ವೆಚ್ಚ/ದೂರವಾಣಿ ವೆಚ್ಚ/ಇತರೆ ವೆಚ್ಚಗಳಿಗಾಗಿ , ಪೀಠೋಪಕರಣ,ಪುಸ್ತಕಗಳು, ಪ್ರಯೋಗಾಲಯ ಉಪಕರಣ ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳಿಗಾಗಿ ಅನುದಾನವನ್ನು ಬಿಡುಗಡೆ ಮಾಡಲಾದ ಬಗ್ಗೆ ವಿವರಣಾ ಪಟ್ಟಿ

ಕ್ರ.ಸಂ	ಕಾಲೇಜಿನ ಹೆಸರು	ಬಿಡುಗಡೆ ಮಾಡಲಾದ ಮೊತ್ತ			
		ಒಟ್ಟು			
		2009-10	2010-11	2011-12	2012-13
1	ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು	1546000	7810488	1271100	44400
2	ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು	1225500	6187681	633500	48300
3	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ	728100	825551	1018000	44300
4	ಸರ್ಕಾರಿ ಮಹಿಳಾ ಕಾಲೇಜು, ವಿಜಯನಗರ ಮೈಸೂರು	537000	4828515	3345000	0
5	ಶ್ರೀ ಡಿ.ದೇವರಾಜು ಅರಸು ಸ.ಪ್ರ.ದರ್ಜ. ಮಾನಸೂರು	761600	1986566	1438700	50800
6	ಸ.ಪ್ರ.ದ.ಕಾ ಮಹಿಳಾ ಹುಣಸೂರು	380000	338948	475000	0
7	ಸಪ್ರದಕಾ ಬಳತೆರೆ	380000	588628	575000	0
8	ಸಪ್ರದಕಾ ಪಿರಿಯಾಪಟ್ಟಣ	380000	211628	525860	0
ಒಟ್ಟು		5938200	22878305	9292160	187800

21/7/12
ಕಾಲೇಜು ಶಿಕ್ಷಣ ನಿರ್ದೇಶಕರು